ಆ) ಹಾಗಿದ್ದಲ್ಲಿ, ತುಮಕೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಾಗಿಸಿ ಕೊರಟಗೆರೆ ತಾಲ್ಲೂಕಿಗೆ ವಿಸ್ತರಿಸುವುದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು

ಇ) ಕೊರಟಗೆರೆ ತಾಲ್ಲೂಕಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಯಾವಾಗ ಮಾಡಲಾಗುತ್ತದೆ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ),ಆ),ಇ) ಸದ್ಯಕ್ಕೆ ಇಲ್ಲಿ ಸ್ವತಂತ್ರ ಮಾರುಕಟ್ಟೆಯನ್ನು ಸ್ಥಾಪಿಸುವಷ್ಟು ವಹಿವಾಟು ಅಭಿವೃದ್ಧಿಗೊಂಡಿರುವುದಿಲ್ಲ ವಹಿವಾಟು ಅಭಿವೃದ್ಧಿಗೊಂಡಾಗ ಈ ಬಗ್ಗೆ ಪರಿಶೀಲಿಸಲಾಗುವುದು

480(442) ಶ್ರೀ ಲಕ್ಷ್ಮಣ್ ಸಂಗಪ್ಪ ಸಾವದಿ (ಅಥಣಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲಾ ಅಥಣಿ ತಾಲ್ಲೂಕು ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ಇಲ್ಲಿಯವರೆಗೆ ರೈತರ ಬಗ್ಗೆ ಸರಕಾರ ಯಾವ ಕಾಳಜಿ ವಹಿಸಲಾಗಿದೆ?

ಆ) ರೈತರು ತೆಗೆದುಕೊಂಡ ಬ್ಯಾಂಕಿನ ಬೆಳೆ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಜರುಗಿಸಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡಿರುವುದಿಲ್ಲ ಆದರೆ 2002ನೇ ಖಾರೀಫ್(ಮುಂಗಾರು) ಮತ್ತು 2002ನೇ ರಬಿ(ಹಿಂಗಾರು) ಅವಧಿಯಲ್ಲಿ ವಿತರಿಸಲಾದ ಎಲ್ಲಾ ಅಲ್ಪಾವಧಿ ಬೆಳೆ ಸಾಲಗಳ ಮೇಲಿನ ಬಡ್ಡಿ ಕ್ರಮವಾಗಿ ರೂ 127 00 ಕೋಟಿ ಮತ್ತು ರೂ 40 30 ಕೋಟಿಗಳನ್ನು ಮನ್ನಾ ಮಾಡಲು ಸರ್ಕಾರ ಆದೇಶಿಸಿದೆ]

ದಿನಾಂಕ 31–03–2003ಕ್ಕೆ ತೋಟಗಾರಿಕೆ ಬೆಳೆಗಳಿಗೆ (ರಬ್ಬರ್, ವೆನಿಲಾ, ಹಣಬೆ ಮತ್ತು ತಾಳೆ ಹೊರತುಪಡಿಸಿ) ಬಾಕಿಇರುವ ದೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಪಿಕಾರ್ಡ್ ಬ್ಯಾಂಕುಗಳಿಗೆ ಮರುಪಾವತಿಸಿದಲ್ಲಿ ಹೊರ ಬಾಕಿ ಇರುವ (Outstanding) ಸಾಲಗಳ ಮೇಲಿನ ಚಾಲ್ತಿ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 20 00 ಕೋಟಿ ರೂ ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೂಡಲು ಮಂಜೂರಾತಿ ನೀಡಲಾಗಿದೆ ದಿನಾಂಕ 31–3–2003ಕ್ಕೆ ಬಾಕಿಯಿರುವ ದೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಶೇ 9ರ ಬಡ್ಡಿ ಸಹಿತ ಪಿಕಾರ್ಡ್ ಬ್ಯಾಂಕ್‌ಗಳಿಗೆ ಮರುಪಾವತಿಸಿದಲ್ಲಿ ಶೇ 9ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 33 00 ಕೋಟಿ ರೂ ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೊಡಲು ಮಂಜೂರಾತಿ ನೀಡಲಾಗಿದೆ ಇದಲ್ಲದೆ ವಿಫಲಭಾವಿ ಪರಿಹಾರ ಯೋಜನೆಯಡಿ ಸರ್ಕಾರವು ರೂ 22 00 ಕೋಟಿಗಳನ್ನು ಸಹ ಮಂಜೂರು ಮಾಡಿದೆ ಮೇಲ್ಕಂಡ ಯೋಜನೆಗಳ ಸೌಲಭ್ಯಗಳು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಸಾಲ ಪಡೆದಿರುವ ರೈತರಿಗೂ ಸಹ ಅನ್ವಯವಾಗಿರುತ್ತದೆ

ಆ) ಸದ್ಯಕ್ಕೆ ಅಂತಹ ಪ್ರಸ್ತಾವವು ಸರ್ಕಾರದ ಮುಂದೆ ಇರುವುದಿಲ್ಲ

481(735) ಶ್ರೀ ಮಲ್ಲಿಕಾರ್ಜುನ ಸಿದ್ಧರಾಮಪ್ಪ ಖೂಬ (ಬಸವ ಕಲ್ಯಾಣ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಈ ಕಾಲೇಜುಗಳು ಯಾವ ಯಾವ ಸ್ಥಳದಲ್ಲಿವೆ ಹಾಗೂ ಈ ಕಾಲೇಜುಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,